ಪ್ರಕಟಣೆ

೧. ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಸದಸ್ಯರ ಪ್ರಶ್ನೆಗಳಿಗೆ ಉತ್ತರಗಳನ್ನು ವಿಧಾನ ಮಂಡಲದ ಕಾರ್ಯಾಲಯಕ್ಕೆ ಒಂದು ದಿನ ಮೊದಲೇ ಪೂರೈಸುವ ಬಗ್ಗೆ ಮಂತ್ರಿ ಒಬ್ಬ ಸದಸ್ಯರು ಪ್ರಶ್ನೆಗೆ ಪೂರೈಸುವ ಉತ್ತರಗಳನ್ನು ಎಲ್ಲಾ ಸದಸ್ಯರಿಗೂ ಪೂರೈಸುವ ಬಗ್ಗೆ ಅನೇಕ ಸದಸ್ಯರಿಂದ ಸಲಹೆಗಳು ಬಂದ ಮೇರೆಗೆ, ಆ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿ ಸರ್ಕಾರದವರು ಸದರಿ ಸಲಹೆಯನ್ನು ಒಪ್ಪಿದ್ದು, ಆ ಬಗ್ಗೆ ಕ್ರಮಾಂಕ ಡಿಪಿಎಆರ್ ೬ ಎಲ್‌ಎಂಕ್ಯೂ ೮೮, ದಿನಾಂಕ ೨೩-೧-೧೯೮೮ರಂದು ಸುತ್ತೋಲೆಯನ್ನು ಹೊರಡಿಸಿ ಎಲ್ಲಾ ಇಲಾಖಾ ಕಾರ್ಯದರ್ಶಿಗಳಿಗೆ ಸೂಚನೆಗಳನ್ನು ನೀಡಿದ್ದಾರೆ. ಈ ವಿಷಯವನ್ನು ಎಲ್ಲಾ ಮಾನ್ಯ ಸದಸ್ಯರಿಗೂ ದಿನಾಂಕ ೩-೩-೧೯೮೮ ರಂದು ನಾನು ಪತ್ರ ಬರೆದು ತಿಳಿಸಿರುತ್ತೇನೆ. ಹಾಗೂ ದಿನಾಂಕ ೩-೨-೧೯೮೮ರಿಂದ ಮಾನ್ಯ ಸದಸ್ಯರೆಲ್ಲರಿಗೂ ಸದರಿ ಉತ್ತರಗಳನ್ನು ಕಳುಹಿಸಲು ಪ್ರಾರಂಭಿಸಲಾಗಿದೆ.

೨. ಹಾಗೂ ಸದಸ್ಯರು ಅನೇಕ ಪ್ರಶ್ನೆಗಳು, ಅವುಗಳಿಗೆ ಸಂಬಂಧಿಸಿದ ಉತ್ತರಗಳು ಅತಿ ಸಾರ್ವಜನಿಕ ಮಹತ್ವವುಳ್ಳವುಗಳಾಗಿರುವುದರಿಂದ, ಸಾರ್ವಜನಿಕರ, ಸದಸ್ಯರ ಹಾಗೂ ಸರಕಾರದ ಹಿತದೃಷ್ಟಿಯಿಂದ ಸದನದಲ್ಲಿ ಗೈರು ಹಾಜರಿರುವ ಸದಸ್ಯರ ಹೆಸರಿನಲ್ಲಿರುವ ಚುಕ್ಕೆ ಗುರುತಿನ ಪ್ರಶ್ನೆಗಳ ಉತ್ತರಗಳನ್ನು ಲಿಖಿತ ಉತ್ತರಗಳೆಂದು ಪರಿಗಣಿಸಿ ಸಭೆಯ ಮುಂದೆ ಇಡಲು ಆದೇಶ ನೀಡಿರುತ್ತೇನೆ

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಆರ್.ಎಲ್. ಜಾಲಪ್ಪ (ಗೃಹ ಮಂತ್ರಿ).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದಿಡಲು ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

೧೯೫೨ನೇ ಇಸವಿಯ ತನಿಖಾ ಆಯೋಗದ ಶಾಸನದ ೩(೪)ನೇ ಕಲಮಿನ ಮೇರೆಗೆ,

"೧೯೮೪ರ ಮಾರ್ಚಿ ತಿಂಗಳಲ್ಲಿ ಬೆಂಗಳೂರು ನಗರದ ವಿವಿಧ ಸ್ಥಳಗಳಲ್ಲಿ ನಡೆದ ಪೋಲೀಸ್ ಗೋಲೀಬಾರಿನ ಬಗ್ಗೆ ವಿಚಾರಣೆ ನಡೆಸಲು ನೇಮಿಸಲಾದ ನ್ಯಾಯಮೂರ್ತಿ ಪಿ.ಎ. ಕುಲಕರ್ಣಿ ವಿಚಾರಣಾ ಆಯೋಗದ ವರದಿಯನ್ನು ಸರಕಾರದ ಜ್ಞಾಪನಾ ಪತ್ರದೊಂದಿಗೆ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮುಂದಿಡಲಾಯಿತು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—೧೯೫೬ನೇ ಇಸವಿಯ ಬಾಲಪರಾಧ ನ್ಯಾಯ ನಿರ್ವಹಣೆ ಶಾಸನದ (೧೯೮೬ನೇ ಇಸವಿಯ ೫೩ನೇ ಸಂಖ್ಯೆಯ ಕೇಂದ್ರ ಶಾಸನ) ೬೨ನೇ ಕಲಮಿನ ಮೇರೆಗೆ :

"೧೯೮೬ನೇ ಇಸವಿಯ ಬಾಲಾಪರಾಧ ನ್ಯಾಯ ನಿರ್ವಹಣೆ (ಕರ್ನಾಟಕ) ನಿಯಮಾವಳಿಗೆ ಸಂಬಂಧಿಸಿದಂತೆ ದಿನಾಂಕ ೨೮ನೇ ನವೆಂಬರ್ ೧೯೮೭ರಂದು ಹೊರಡಿಸಲಾದ ಎಸ್‌ಡಬ್ಲ್ಯೂ ಎಲ್‌೧೧ ಎಸ್ ಬಿಪಿ ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮುಂದಿಡಲಾಯಿತು.

೧೨-೩೦ ಪಿ.ಎಂ.

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಮಂತ್ರಿ).—೧೯೭೬ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಂಗಳ ಶಾಸನದ ೪೫(೨)ನೇ ಕಲಮಿನ ಮೇರೆಗೆ :

೧೯೮೫-೮೬ನೇ ಸಾಲಿನ ಗುಲ್ಬರ್ಗ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮುಂದಿಡಲಾಯಿತು.